ಭರತಖಂಡದ ನೀಲಗಗನವ ತಿಮಿರ ಮುಸುಗಿರಲು,
ಭಾರತೀಯರು ತಮ್ಮ ಧ್ಯೇಯವ ಮರೆತು ಮಲಗಿರಲು
ಪರಮಹಂಸನೆ, ಉದಯಸೂರ್ಯನ ತೆರದಿ ರಂಜಿಸಿದೆ,
ಹೃದಯನಭದಜ್ಞಾನ ತಿಮಿರವನಿರದೆ ಭಂಜಿಸಿದೆ.

ಸರ್ವಮಾರ್ಗಗಳೊಂದೆ ನಿಲಯಕೆ ಪೋಪುವೆಂಬುದನು
ಯೋಗವಿದ್ಯೆಯೊಳರಿತು ಮಾನವಕುಲಕೆ ಬೋಧಿಸಿದೆ;
ಕ್ರೈಸ್ತ ಹಿಂದೂ ಮಹಮದೀಯರೆ ಬೌದ್ಧ ಮೊದಲಾದ
ಮತಗಳಾತ್ಮವದೊಂದೆ ಎಂಬುದ ತಿಳುಹಿ ಪಾಲಿಸಿದೆ.

ಮಾಯ ತಿಮಿರದ ಮಾರ್ಗ ಕಾಣದೆ ಗೋಳಿಡುತಲಿಹರ
ಅಭಯದೀಪವ ಹಿಡಿದು ದಾರಿಯ ತೋರಿ ರಕ್ಷಿಸಿದೆ;
ಘೋರಸಂಸಾರಾಂಬುನಿಧಿಯೊಳು ಮುಳುಗಿ ತೇಲುವರ
ಅಮೃತನಾವೆಯ ತಂದು ವೇಲೆಯನಿರದೆ ಸೇರಿಸಿದೆ

ಶಿರವ ನಾಕದೊಳಿರಿಸಿ ಚರಣಗಳೆರಡ ಭೂತಳದಿ
ಗುರು ಹಿಮಾಚಲದಂತೆ ನಿಂತಿಹೆ, ಶಾಂತಿಯಾಶ್ರಯನೆ,
ಹೃದಯ ನಿನ್ನದು ಮೇರೆಯಿಲ್ಲದ ರೌದ್ರ ವಾರಿನಿಧಿ
ಚಲಿತ ಮತಗಳ ಚಂದ್ರನಾವೆಗಳಲ್ಲಿ ತೇಲುತಿವೆ!

ಕ್ರೈಸ್ತ ಮಹಮದ ರಾಮ ಕೃಷ್ಣ ಜೊರಾಸ್ತ ಗೌತಮರು
ದಿವ್ಯ ವೇದ ಕೊರಾನು ಬೈಬಲು ತಲ್ಮಡಾದಿಗಳು
ಗುಡಿಯು ಚರ್ಚು ಮಸೀದಿ ಆಶ್ರಮ ಅಗ್ನಿಪೂಜೆಗಳು
ಕಾಶಿ ಮೆಕ್ಕಗಳೆಲ್ಲ ನಿನ್ನೊಳಗೈಕ್ಯವಾಗಿಹವು!

ದಕ್ಷಿಣೇಶ್ವರ ದೇವನಿಲಯದ ಪರಮಯೋಗೀಂದ್ರ
ಶ್ರೀವಿವೇಕಾನಂದ ಪೂಜಿತನಾತ್ಮಭಾವಿತನೆ,
ಲೋಕಜೀವರಿಗಾತ್ಮಶಕ್ತಿಯ ನೀಡಿ ಕಾಪಾಡು
ನೆನೆವರೆಲ್ಲರ ಹೃದಯವಾಗಲಿ ನಿನ್ನ ನೆಲೆವೀಡು!

– ಕುವೆಂಪು



ಮರಣಭಯ ವಿಹ್ವಲನು ನಾನಾದೆನೆಲೆ ತಾಯಿ
ಪಾರುಗಾಣಿಸು ನನ್ನ ಭವತಾರಿಣಿ
ನೀನು ಗಮನಿಸದಿರಲು ನಾಶವಾಗುವೆ ನಾನು
ಕಾಪಾಡು ಕಾಪಾಡು, ಭಯಹಾರಿಣಿ

ಸಕಲಲೋಕದ ತಾಯಿ, ಸರ್ವಜನರಾಧಾರೆ
ಲೋಕಮೋಹಿನಿ ಮತ್ತೆ ಜಗತಜನನೀ
ಅಲ್ಲಿ ಬೃಂದಾವನದಿ ರಾಧಾ ವಿನೋದಿನೀ
ಗೋಪೀಜನವಲ್ಲಭನ ಮನಮೋಹಿನೀ

ರಾಸಲೀಲೆಯೊಳಿರುವ ಓ ರಾಸರಂಗಿನೀ
ನೀ ಗಿರಿಜೆ, ನೀ ಗೋಪಿ, ಗೋವಿಂದ ಮೋಹಿನೀ,
ಓ ಜಗನ್ಮಾತೆ ಗಂಗೆ ಪರಮಗತಿದಾಯಿನೀ
ಓ ಸದಾನಂದೆ, ಶಿವೆ, ಚಿರಂತನೇ

ಸಗುಣ–ನಿರ್ಗುಣ ರೂಪೆ ಸರ್ವಸ್ವರೂಪಿಣೀ
ಶರ್ವಪ್ರಿಯೆ, ಘನಮಹಿಮೆ, ನಿನ್ನಮಿತ ಲೀಲೆಗಳು
ಯಾರು ಬಲ್ಲರು ಹೇಳು ಮೂಲೋಕದಿ!

– ಶ್ರೀರಾಮಕೃಷ್ಣರು ಹಾಡಿರುವ
'ವಚನವೇದ' ದ ಹಾಡು

## ಗೃಹಸ್ಥರ ಕರ್ತವ್ಯ

ತಪ್ಪದೆ ಎಲ್ಲರೂ ಕರ್ಮ ಮಾಡುತ್ತಲೇ ಇದ್ದಾರೆ. ಭಗವಂತನ ನಾಮಗುಣಕೀರ್ತನೆ ಮಾಡುವುದೂ ಕರ್ಮವೇ... ಕರ್ಮವನ್ನು ತ್ಯಾಗಮಾಡುವ ಹಾಗೇ ಇಲ್ಲ. ಆದ್ದರಿಂದ ಕರ್ಮ ಮಾಡು, ಅದರ ಫಲವನ್ನು ಭಗವಂತನಿಗೆ ಸಮರ್ಪಿಸಿಬಿಡು.. ಹೆಂಡತಿ ಮಕ್ಕಳನ್ನು ಅವರ ಅನ್ನ ಬಟ್ಟೆಗೆ ತೊಂದರೆಯಾಗುತ್ತಿರುವವರೆಗೆ ಸಲಹಬೇಕು. ಆದರೆ ಮಕ್ಕಳು ತಮ್ಮ ಕಾಲ ಮೇಲೆ ನಿಂತುಕೊಳ್ಳಲು ಸಮರ್ಥರಾದರು ಎಂದರೆ ಮತ್ತೆ ಅವರ ಹೊರೆಯನ್ನು ಹೊತ್ತುಕೊಳ್ಳುವ ಆವಶ್ಯಕತೆಯೇನೂ ಇರುವುದಿಲ್ಲ. ಹಕ್ಕಿಯ ಮರಿ ಮೇವು ಹುಡುಕಲು ಕಲಿತುಕೊಂಡ ಬಳಿಕ, ಅದೇನಾದರೂ ತಾಯಿಯ ಹತ್ತಿರಕ್ಕೆ ಬಂದರೆ ತಾಯಿ ಹಕ್ಕಿ ಕುಟುಕಿ ಓಡಿಸಿಬಿಡುತ್ತದೆ... ಭಗವಂತನ ಕಡೆಗೆ ನಾವು ಮುಂದುವರಿದಷ್ಟೂ ಆತ ನಮ್ಮ ಕೆಲಸಕಾರ್ಯಗಳನ್ನು ಕಡಿಮೆಮಾಡಿ ಕೊಟ್ಟುಬಿಡುತ್ತಾನೆ, ಹೆದರಬೇಡ. ಸದ್ಯ ಮಾಡಬೇಕಾಗಿರುವ ಕೆಲಸಗಳನ್ನು ಮಾಡಿ ಮುಗಿಸಿಬಿಡು. ಬಳಿಕ ನಿಶ್ಚಿಂತೆಯಿಂದ ಇರಬಲ್ಲೆ... ಸಂಸಾರವನ್ನು ನೀವೇಕೆ ತ್ಯಜಿಸಲು ಹೋಗಬೇಕು? ಸಂಸಾರದಲ್ಲಿ ಇದ್ದರೂ ಭಗವಂತ ದೊರೆಯಬಹುದು. ಸಂಸಾರದಲ್ಲಿ ಇದ್ದು ಭಗವಂತನ ಸಾಕ್ಷಾತ್ಕಾರ ಪಡೆಯಬೇಕಾದರೆ, ಒಂದು ಕೈಯಿಂದ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಂಡಿರಬೇಕು, ಇನ್ನೊಂದು ಕೈಯಿಂದ ಕೆಲಸಕಾರ್ಯಗಳನ್ನು ಮಾಡುತ್ತಿರಬೇಕು. ಯಾವಾಗ ಕೆಲಸಕಾರ್ಯಗಳಿಂದ ಬಿಡುಗಡೆ ಹೊಂದುವೆಯೋ, ಆಗ ಎರಡೂ ಕೈಗಳಿಂದಲೂ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಳ್ಳಬೇಕು. ಆಗಾಗ್ಗೆ ನಿರ್ಜನಪ್ರದೇಶದಲ್ಲಿ ವಾಸಮಾಡಬೇಕು, ಕೇವಲ ಆತನ ಚಿಂತನೆ ಮತ್ತು ಸೇವೆಯಲ್ಲಿ ನಿತರನಾಗಿರಬೇಕು.

– ಶ್ರೀರಾಮಕೃಷ್ಣ ('ರಾಮಕೃಷ್ಣ ವಚನವೇದ' ದಲ್ಲಿ)